**ಸರ್ವಶಿಕ್ಷಣ ಅಭಿಯಾನ ಮಿಷನ್ – ಕರ್ನಾಟಕ**
**ರಾಜ್ಯ ಯೋಜನಾ ನಿರ್ದೇಶಕರ ಕಛೇರ, ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ**
**ನೃಪತುಂಗ ರಸ್ತೆ, ಬೆಂಗಳೂರು–560001**

**ಸರ್ವಶಿಕ್ಷಣ ಅಭಿಯಾನ ಸಮಿತಿಯ 3ನೇ ಆಡಳಿತ ಮಂಡಳಿ (ಗವರ್ನಿಂಗ್ ಕೌನ್ಸಿಲ್) ಸಭೆಯ ನಡವಳಿಗಳು:**

**ದಿನಾಂಕ 06–03–2007 ರಂದು ಸನ್ಮಾನ್ಯ ಶ್ರೀ. ಬಸವರಾಜ ಎಸ್.ಹೊರಟ್ಟಿ, ಶಿಕ್ಷಣ ಸಚಿವರು (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಕರ್ನಾಟಕ ಸರ್ಕಾರ ಹಾಗೂ ಪದನಿಮಿತ್ತ ಉಪಾಧ್ಯಕ್ಷರು, ಸರ್ವಶಿಕ್ಷಣ ಅಭಿಯಾನ ಮಿಷನ್–ಕರ್ನಾಟಕ ಇವರ ಅಧ್ಯಕ್ಷತೆಯಲ್ಲಿ ನಡೆದ 3ನೇ ಆಡಳಿತ ಮಂಡಳಿ ಸಭೆಯ ನಡವಳಿಗಳು:**

ಮಾನ್ಯಶ್ರೀ ತ.ಮ.ವಿಜಯಭಾಸ್ಕರ್. ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಕರ್ನಾಟಕ ಸರ್ಕಾರ ಇವರು ಸಭೆಯಲ್ಲಿ ಹಾಜರಿದ್ದ, ಸರ್ವ ಶಿಕ್ಷಣ ಅಭಿಯಾನ ಮಿಷನ್‌ನ ಆಡಳಿತ ಮಂಡಳಿಯ ಮಾನ್ಯ ಉಪಾಧ್ಯಕ್ಷರು ಮತ್ತು ಸದಸ್ಯರುಗಳನ್ನು ಸ್ವಾಗತಿಸಿದರು.

(ಹಾಜರಿದ್ದ ಸದಸ್ಯರ ಪಟ್ಟಿಯನ್ನು ಅನುಬಂಧಿಸಿದೆ.)

**ಅಜೆಂಡಾ–1.**

**ದಿನಾಂಕ 09–09–2005 ರಂದು ನಡೆದ ಹಿಂದಿನ ಸಭೆಯ ನಡವಳಿಗಳ ಅನುಮೋದನೆ:**

ಹಿಂದಿನ ಸಭೆಯ ನಡವಳಿಗಳನ್ನು ಚರ್ಚಿಸಿ, ಸಭೆಯು ಅನುಮೋದನೆಯನ್ನು ನೀಡಿತು.

**ಅಜೆಂಡಾ–2**
**ಹಿಂದಿನ ಸಭೆಯ ನಿರ್ಣಯಗಳ ಮೇಲೆ ಕೈಗೊಂಡ ಕ್ರಮಗಳು :**

1. ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದಡಿ 1 ರಿಂದ 10 ನೇ ತರಗತಿಯವರೆಗಿನ ಎಲ್ಲ ಮಕ್ಕಳ ಶೈಕ್ಷಣಿಕ ಮಾಹಿತಿಯನ್ನು ಇ.ಎಂ.ಐ.ಎಸ್. ಮೂಲಕ ಪಡೆಯಲಾಗುತ್ತಿದ್ದು, ಶಾಲಾವಾರು, ತರಗತಿವಾರು, ಜಾತಿ–ವರ್ಗವಾರು ಅಂಕಿ–ಅಂಶಗಳನ್ನು ಶಾಲಾ ಹಂತದಿಂದ ಸಂಗ್ರಹಿಸಿ, ಆಯಾ ಹಂತದಲ್ಲಿ ಕ್ರೋಢೀಕರಿಸಿ, ಅಂತಿಮವಾಗಿ ರಾಜ್ಯ ಮಟ್ಟದಲ್ಲಿ ಕ್ರೋಢೀಕರಿಸಲಾಗುತ್ತಿದೆ. ಈ ಅಂಕಿ ಅಂಶಗಳನ್ನು ಪುನರ್‌ಪರಿಶೀಲಿಸಿ, ನಂತರ ಅಗತ್ಯವಿರುವ ಯೋಜನೆಗಳನ್ನು ರೂಪಿಸುವಲ್ಲಿ ಬಳಸಲಾಗುತ್ತಿದೆ. ಎಂಬ ಅಂಶಗಳನ್ನು ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು ಸಭೆಗೆ ವಿವರಿಸಿದರು.

2. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು ಪ್ರಾಥಮಿಕ ಶಿಕ್ಷಣದಲ್ಲಿ ಮಕ್ಕಳು ಶಾಲೆಯನ್ನು ತೊರೆಯುವ ದರವು ಗಣನೀಯವಾಗಿ ಇಳಿಮುಖವಾಗಿದ್ದು, ಪ್ರಸ್ತುತ 1 ರಿಂದ 5ನೇ ತರಗತಿಗಳಲ್ಲಿ ಶೇ. 7 ಹಾಗೂ 1 ರಿಂದ 8ನೇ ತರಗತಿಗಳಲ್ಲಿ ಶೇ. 14 ರಷ್ಟು ಇರುವುದಾಗಿ ಸಭೆಗೆ ತಿಳಿಸಿದರು.

3. ಇಲಾಖೆಯ ವೆಬ್‌ಸೈಟನ್ನು ಎನ್.ಐ.ಸಿ. ಸಹಾಯದಿಂದ ಊರ್ಜಿತಗೊಳಿಸಿದ್ದು, ತಾಂತ್ರಿಕ ಬಳಕೆಗಾಗಿ ಇ-ಮೇಲ್, ಎಲ್.ಪಿ.ಓ.ಗಳನ್ನು ಅಳವಡಿಸುವುದಾಗಿ ತಿಳಿಸಿದರು. ಈ ಹಂತದಲ್ಲಿ ಮಾನ್ಯ ಶಿಕ್ಷಣ ಸಚಿವರು ಎಲ್ಲಾ ಉಪನಿರ್ದೇಶಕರ ಕಛೇರಿಯಲ್ಲಿ ಇ-ಮೇಲ್ ಸೌಲಭ್ಯವಿದ್ದರೂ ಸಹ ಮಾಹಿತಿಯನ್ನು ನೀಡುವಲ್ಲಿ ವಿಳಂಬವಾಗುತ್ತಿದೆ. ಈ ಕುರಿತು ಎಲ್ಲಾ ಉಪನಿರ್ದೇಶಕರುಗಳಿಗೆ ಅಗತ್ಯ ಸೂಚನೆಯನ್ನು ನೀಡಲು ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ತಿಳಿಸಿದರು. ನಿಗದಿತ ಅವಧಿಯಲ್ಲಿ ಮಾಹಿತಿ ನೀಡದ ಉಪ ನಿರ್ದೇಶಕರುಗಳಿಗೆ ಎಚ್ಚರಿಕೆ ನೀಡಲು ಮಾನ್ಯ ಸಚಿವರು ತಿಳಿಸಿದರು.

ಮಾನ್ಯ ಸರ್ಕಾರದ ಮುಖ್ಯಕಾರ್ಯದರ್ಶಿಗಳು ಉಪನಿರ್ದೇಶಕರುಗಳಿಗೆ ಸುತ್ತೋಲೆ, ಜ್ಞಾಪನ ಇತ್ಯಾದಿಗಳ ಹಾರ್ಡ್‌ಪ್ರತಿಯನ್ನು ಕಳುಹಿಸದೆ, ಪ್ರಾಯೋಗಿಕವಾಗಿ ಕೇವಲ ಇ-ಮೇಲ್ ಮೂಲಕ ಅನುಸರಿಸಲು ಸೂಚಿಸಿದರು.

ಇಂಟರ್‌ನೆಟ್ ಹಾಗೂ ಇ-ಮೇಲ್ ಲಭ್ಯತೆ ಮತ್ತು ಅನುಸರಣೆಯನ್ನು ಇಲಾಖೆಯಲ್ಲಿ ಗರಿಷ್ಠ ಮೂರು ತಿಂಗಳೊಳಗೆ, ಅಂದರೆ ಜುಲೈ 1, 2007 ರೊಳಗೆ ಕಟ್ಟುನಿಟ್ಟಾಗಿ ಪಾಲಿಸಲು ಹಾಗೂ ವೆಬ್‌ಸೈಟ್‌ನ ಲಭ್ಯ ಮಾಹಿತಿಗಳನ್ನು ಅಪ್‌ಡೇಟ್ ಸಹ ಮಾಡಿಸಲು ಸೂಚಿಸಿದರು. ಈ ಕುರಿತು ಅನುಪಾಲನೆಯು ಅಗತ್ಯವೆಂದು ಸಭೆಯು ನಿರ್ಣಯಿಸಿತು. ಇಲಾಖೆಯು ವೆಬ್‌ಸೈಟ್ ಬಿಡುಗಡೆ ಮಾಡಿರುವ ಕುರಿತು ಪತ್ರಿಕೆಗಳಲ್ಲಿ ಪ್ರಕಟಣೆ ನೀಡಿ. ಯಾವುದೇ ಸ್ಪಷ್ಟೀಕರಣವಿದ್ದಲ್ಲಿ, ನೀಡುವಂತೆ ಕೋರಲು ಸೂಚಿಸಿತು.

4. ಎಂ.ಹೆಚ್.ಆರ್.ಡಿ.ಯು ನೀಡುತ್ತಿರುವ ಪ್ರತಿ ಶಾಲೆಯ ಘಟಕವೊಂದಕ್ಕೆ ಶಾಲಾ ಅನುದಾನ ರೂ.2000/-ಗಳು ಸಾಕಾಗುವುದಿಲ್ಲ. ಆದ ಕಾರಣ ಈ ಅನುದಾನವನ್ನು ಶಾಲೆಯ ಎಲ್ಲಾ ಶಿಕ್ಷಕರ ವೇತನದ ಶೇ.5ರಷ್ಟು ಏರಿಸುವಂತೆ ಭಾರತ ಸರ್ಕಾರಕ್ಕೆ ಪತ್ರವನ್ನು ಬರೆದಿರುವುದಾಗಿ ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು ಸಭೆಗೆ ತಿಳಿಸಿದರು. ಈ ಕುರಿತು ಮುಖ್ಯ ಕಾರ್ಯದರ್ಶಿಯವರಿಂದ ಸಹ ಭಾರತ ಸರ್ಕಾರಕ್ಕೆ ಪತ್ರ ಬರೆಯಲು ಕ್ರಮ ಕೈಗೊಳ್ಳಲು ಸೂಚಿಸಲಾಯಿತು. ಶಾಲೆಗಳಿಗೆ ಪೀಠೋಪಕರಣ ಸಾಮಗ್ರಿಗಳನ್ನು ಪೂರೈಸುವ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಅಗತ್ಯವಿರುವ ಅನುದಾನದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಮಾನ್ಯ ಮುಖ್ಯ ಕಾರ್ಯದರ್ಶಿಯವರು ಸೂಚಿಸಿದರು.

ಮಾನ್ಯ ಶಿಕ್ಷಣ ಸಚಿವರು, ಶಾಲೆಗಳ ಗಾತ್ರಕ್ಕೆ ಅನುಗುಣವಾಗಿ ಅಗತ್ಯವಿರುವ ಶಾಲಾ ನಿರ್ವಹಣಾ ಅನುದಾನದ ಘಟಕ ವೆಚ್ಚದ ಪ್ರಸ್ತಾಪವನ್ನು ಇ.ಎಂ.ಐ.ಎಸ್. ಆಧಾರದ ಮೇಲೆ ಸಲ್ಲಿಸುವಂತೆ ಸೂಚಿಸಿದರು.

5. ಮಾನ್ಯ ಶಿಕ್ಷಣ ಸಚಿವರು, ಶಾಲೆಗಳಿಗೆ ಸ್ವಚ್ಛತೆ ಮತ್ತು ಭದ್ರತೆಗಾಗಿ 'ಡಿ' ಗುಂಪಿನ ನೌಕರರ ಕೊರತೆಯನ್ನು ಪ್ರಸ್ತಾಪಿಸಿದರು, ಆರ್ಥಿಕ ನಿಬಂಧನೆಗಳು ಇರುವುದರಿಂದ ಖಾಲಿಯಾದ ಗ್ರೂಪ್ 'ಡಿ' ಹುದ್ದೆಗಳನ್ನು ಮರುಭರ್ತಿ ಮಾಡಿರುವುದಿಲ್ಲ ಹಾಗೂ ಅಂತಹ ಹುದ್ದೆಗಳನ್ನು ರದ್ದು ಮಾಡಲಾಗಿದೆ. ಗ್ರೂಪ್ 'ಡಿ' ನೌಕರರು ಇಲ್ಲದ ಕಾರಣ ಶಾಲೆಗಳ ಸ್ವಚ್ಛತೆ ಮತ್ತು ಭದ್ರತೆಯನ್ನು ನಿರ್ವಹಿಸುವುದು ಕಷ್ಟವಾಗಿದೆ ಹಾಗೂ ಯಾವುದೇ ಪರ್ಯಾಯ ವ್ಯವಸ್ಥೆಯನ್ನು ಜಾರಿಗೊಳಿಸಿರುವುದಿಲ್ಲ.

ಇದರ ಬಗ್ಗೆ ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಮಾತನಾಡುತ್ತಾ, ಇಲ್ಲಿಯವರೆಗೆ ರದ್ದಾದ ಗ್ರೂಪ್ 'ಡಿ' ಹುದ್ದೆಗಳಿಂದಾಗಿ, ಸರ್ಕಾರಕ್ಕೆ ಆಗುತ್ತಿರುವ ಉಳಿತಾಯವನ್ನು ಲೆಕ್ಕ ಹಾಕಬೇಕು ಮತ್ತು ಅದೇ ಪ್ರಮಾಣದಲ್ಲಿ ಭದ್ರತೆ ಮತ್ತು ಸ್ವಚ್ಛತೆಗಾಗಿ ಅನುದಾನವನ್ನು ಇಲಾಖೆಗೆ ಬಿಡುಗಡೆ ಮಾಡಬೇಕು ಹಾಗೂ ಇಲಾಖೆಯ ಸದರಿ ಅನುದಾನದಿಂದ 'ಹೊರಗುತ್ತಿಗೆ' ಪದ್ಧತಿಯನ್ನು ಅಳವಡಿಸಿ, ಯಾವುದೇ ಅಧಿಕ ನೇಮಕಾತಿ ಮಾಡದೆ, ಶಾಲೆಗಳ ಸ್ವಚ್ಛತೆ ಮತ್ತು ಭದ್ರತೆಯನ್ನು ಮಾಡಬಹುದು. ಈ ಕುರಿತು ಹಣಕಾಸು ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿದರು.

- ಈ ಹಂತದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮಾತನಾಡಿ, ತಮ್ಮ ಜಿಲ್ಲೆಯಲ್ಲಿ ಎಲ್ಲಾ ಶಾಲೆಗಳಲ್ಲಿಯೂ **ಸುವರ್ಣಕರ್ನಾಟಕ** ಚಿಹ್ನೆಯನ್ನು ರೂಪಿಸಲಾಗಿರುವ ವಿಷಯವನ್ನು ತಿಳಿಸಿದರು. ಮಾನ್ಯ ಶಿಕ್ಷಣ ಸಚಿವರು ಪ್ರತಿ ಶಾಲೆಯಲ್ಲಿ ಹಳೆಯ ವಿದ್ಯಾರ್ಥಿಗಳ ಸಂಘಗಳನ್ನು ಸ್ಥಾಪಿಸಿ, ಶಾಲೆಗಳ ಸರ್ವತೋಮುಖ ಅಭಿವೃದ್ಧಿಗೆ ವಿವಿಧ ಹಂತಗಳಲ್ಲಿ ಹಳೆಯ ವಿದ್ಯಾರ್ಥಿಗಳ ಸಹಕಾರ ಪಡೆಯುವಲ್ಲಿ ಅಗತ್ಯ ಕ್ರಮಕೈಗೊಳ್ಳುವಂತೆ ಸೂಚಿಸಿದರು. ಇದರೊಂದಿಗೆ ಸಾರ್ವಜನಿಕರಿಂದ ದೇಣಿಗೆ ಸಹ ಸಂಗ್ರಹಿಸಲು ಪ್ರಯತ್ನಿಸುವಂತೆ ಸೂಚಿಸಿದರು.

- ಪ್ರಾಥಮಿಕ ಶಿಕ್ಷಕರ ಸಂಘದ ಅಧ್ಯಕ್ಷರು ಈಗ ಹಲವಾರು ಶಾಲೆಗಳಲ್ಲಿ ಈ ಪ್ರಯತ್ನಗಳನ್ನು ಮಾಡಲಾಗುತ್ತಿದ್ದು, ಎಲ್ಲಾ ಶಾಲೆಗಳಲ್ಲಿಯೂ ಮಾಡುವಂತೆ ಶಿಕ್ಷಕರನ್ನು ಪ್ರೇರೇಪಿಸಲು ಪ್ರಯತ್ನಿಸಲಾಗುವುದು ಎಂದು ತಿಳಿಸಿದರು. ಡಾನ್ ಬಾಸ್ಕೊ ಪ್ರತಿನಿಧಿಗಳು **'ಶಾಲಾ ದತ್ತು ಕಾರ್ಯಕ್ರಮ'** ಕೆಲವುಕಡೆ ಅನುಷ್ಠಾನವಾಗಿದ್ದರೂ ಸಹ,

ಮಾನ್ಯ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಶಾಲಾ ದತ್ತು ಕಾರ್ಯಕ್ರಮದಡಿ ಸುಮಾರು 9000 ಶಾಲೆಗಳು ಯಶಸ್ವಿಯಾಗಿ ಪ್ರಯೋಜನ ಪಡೆದಿರುವುದನ್ನು ಸಭೆಯ ಗಮನಕ್ಕೆ ತಂದರು.

- ಮಾನ್ಯ ಶಿಕ್ಷಣ ಸಚಿವರು ಪ್ರತಿ ಕ್ಷೇತ್ರ ಶಿಕ್ಷಣಾಧಿಕಾರಿ ಕಡ್ಡಾಯವಾಗಿ ಪ್ರತಿ ತಿಂಗಳು 1 ರಿಂದ 2 ಶಾಲೆಗಳನ್ನು **"ಶಾಲಾ ದತ್ತು ಕಾರ್ಯಕ್ರಮ"**ದಡಿ ತರಲು ಸೂಚಿಸಿದರು. ಈ ಕುರಿತು ಬಿ.ಇ.ಓ.ಗಳ ಸಭೆಯನ್ನು ಸೇರಿಸಿ, ಅಗತ್ಯ ಸೂಚನೆಗಳನ್ನು ನೀಡಲು ತಿಳಿಸಿದರು. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಕೆಲವು ಖಾಸಗಿ ಶಾಲೆಗಳೂ ಸಹ ಸರ್ಕಾರಿ ಶಾಲೆಗಳನ್ನು ದತ್ತು ತೆಗೆದು ಕೊಳ್ಳಲು ಮುಂದೆ ಬರುತ್ತಾರೆ. ಅವರ ಸಹಕಾರವನ್ನು ಪಡೆಯಲು ಸೂಚಿಸಿದರು.

- ಮಾನ್ಯ ಶಿಕ್ಷಣ ಸಚಿವರು ಎನ್.ಜಿ.ಓ.ಗಳ ಮೂಲಕ ಕಾರ್ಯಕ್ರಮದ ಉಸ್ತುವಾರಿ ಮಾಡಿಸುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು ಹಾಗೂ ಎಲ್ಲಾ ಸಿ.ಇ.ಓ. ಮತ್ತು ಡಿ.ಡಿ.ಪಿ.ಐ.ಗಳ ಸಭೆಯನ್ನು ಕರೆದು, ಈ ಸಭೆಗೆ **'ಛೇಂಬರ್ ಆಫ್ ಕಾಮರ್ಸ್'**, ಪ್ರತಿನಿಧಿಗಳನ್ನು ಕರೆಸಿ, ಪ್ರತಿಯೊಬ್ಬರಿಗೂ ನಿರ್ದಿಷ್ಟ ಗುರಿಯನ್ನು ನೀಡುವಂತೆ ಸೂಚಿಸಿದರು.

- ಈ ಹಂತದಲ್ಲಿ ಡಾನ್ ಬಾಸ್ಕೊ ಪ್ರತಿನಿಧಿಗಳು **'ಶಾಲಾ ದತ್ತು ಯೋಜನೆ'** ಅನುಷ್ಠಾನಗೊಳಿಸುವಲ್ಲಿ 'ಶಾಲಾ ದತ್ತು ಆಂದೋಲನ' ನಡೆಸುವುದು ಹಾಗೂ ಪ್ರೋತ್ಸಾಹ ನೀಡುವುದು ಅಗತ್ಯವೆಂದು ಅಭಿಪ್ರಾಯಪಟ್ಟರು

- ಡಾ. ಎಸ್. ಶ್ರೀಕಂಠಸ್ವಾಮಿ ಇವರು **'ಶಾಲಾ ದತ್ತು ಯೋಜನೆ'** ಕಾರ್ಯಕ್ರಮದ ಅನುಷ್ಠಾನದ ಪ್ರಗತಿಯ ಅಧ್ಯಯನ ಮತ್ತು ಅನುಸರಣೆಯೂ ಅಗತ್ಯವೆಂದು ತಿಳಿಸಿದರು. ಶಾಲಾ ದತ್ತು ಕಾರ್ಯಕ್ರಮದಡಿ ಸಣ್ಣ ಪುಟ್ಟ ಪ್ಯಾಕೇಜುಗಳು – ಉದಾ : ಸುಣ್ಣ–ಬಣ್ಣ, ವಿದ್ಯುದೀಕರಣ, ಕಾಂಪೌಂಡಗಳಿಗೆ ಗೇಟು, ನೀರಿನ ಪೂರೈಕೆಗಳು – ಶಾಲಾ ಯೋಜನೆಯಡಿ ಗುರುತಿಸಲ್ಪಟ್ಟು ದಾನಿಗಳ ಮನಸೆಳೆಯುವಂತಾಗಲು ಅಗತ್ಯ ಕ್ರಮಕ್ಕೆ ಮಾನ್ಯ ಮುಖ್ಯಕಾರ್ಯದರ್ಶಿಗಳು ಸೂಚಿಸಿದರು.

- ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ಉಸ್ತುವಾರಿ ಪದ್ಧತಿಯು (Monitoring Mechanism) ಬಹಳ ದುರ್ಬಲವಿದ್ದು, ಉತ್ತಮಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವ ಅವಶ್ಯಕತೆಯನ್ನು ತಿಳಿಸಿದರು. ರಾಜ್ಯ ಮಟ್ಟದ ಒಂದು ಉಸ್ತುವಾರಿ ಸಮಿತಿಯನ್ನು ರಚಿಸಲು ನಿರ್ಧರಿಸಲಾಯಿತು. ಮಾನ್ಯ ಶಿಕ್ಷಣ ಸಚಿವರು ಮತ್ತು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಇಲಾಖೆ ಮತ್ತು ಸುವರ್ಣ ಗ್ರಾಮೋದ್ಯೋಗಗಳಲ್ಲಿ ಅನುಸರಿಸಲಾಗುತ್ತಿರುವಂತೆ ಉಸ್ತುವಾರಿ ಕ್ರಮವನ್ನು ಕೈಗೊಳ್ಳಲು ಸೂಚಿಸಿದರು.

- ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು ಗದಗ್‌ನಲ್ಲಿ ಡೆಸ್ಕ್ ಅಭಿಯಾನ, ಥಾಟು ಅಭಿಯಾನ, ಮತ್ತು ಶಾಲಾ ದತ್ತು ಯೋಜನೆಯನ್ನು ಅತ್ಯುತ್ತಮವಾಗಿ ನಿರ್ವಹಿಸಿದ್ದು, ಎನ್.ಸಿ.ಇ.ಆರ್.ಟಿ. ವತಿಯಿಂದ ದಾಖಲೀಕರಣ–ಅಧ್ಯಯನ ಸಹ ಕೈಗೊಂಡಿರುವುದನ್ನು ಸಭೆಯ ಗಮನಕ್ಕೆ ತಂದರು. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಸಲಹೆಯಂತೆ ಇಂತಹ ಉತ್ತಮ ಕಾರ್ಯಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವ ಅಧಿಕಾರಿಗಳಿಗೆ ಪ್ರಶಂಸೆ, ಬಹುಮಾನಗಳನ್ನು ನೀಡಲು ನಿರ್ಧರಿಸಲಾಯಿತು.

**6 (ಎ) ಸರ್ವಶಿಕ್ಷಣ ಅಭಿಯಾನ ಮಿಷನ್‌ನ ಪುನರ್ ನಿರ್ದೇಶಿತ ಗುರಿಗಳನ್ನು ಮತ್ತು ಚಟುವಟಿಕೆಗಳನ್ನು ಸರ್ವಶಿಕ್ಷಣ ಅಭಿಯಾನದ ದಾಖಲೆಗಳಲ್ಲಿ ಅಳವಡಿಸಿ, ಅನುಷ್ಠಾನದ ಉಸ್ತುವಾರಿಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು.**

ಈ ಕುರಿತು ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು ಅನುಪಾಲನೆ ಮಾಡಿರುವ ಬಗ್ಗೆ ಸಭೆಗೆ ವಿವರವನ್ನು ನೀಡಿದರು. ಸಭೆಯು ಅನುಮೋದನೆಯನ್ನು ನೀಡಿತು.

**6 (ಸಿ)ಸಿಮ್ಯಾಟ್ ಸ್ಥಾಪನೆಗೆ ಕೇಂದ್ರ ಸರ್ಕಾರದ ಅನುಮತಿ ಪಡೆಯುವುದು.**

ಸಿಮ್ಯಾಟ್ ಸ್ಥಾಪನೆ ಕುರಿತು ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು ಇನ್ನೂ ಕಾರ್ಯಗತವಾಗದಿರುವ ಬಗ್ಗೆ ಸಭೆಗೆ ವಿವರಗಳನ್ನು ನೀಡಲಾಯಿತು. ಆದರೆ ಅಗತ್ಯ ಸೌಲಭ್ಯಗಳು ದೊರಕದ ನಿಮಿತ್ತ, ಅಜೀಂಪ್ರೇಂಜೀ ಪ್ರತಿಷ್ಠಾನದ ಸಹಕಾರದೊಂದಿಗೆ ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ ಎಂಬ ಅಂಶವನ್ನು ಸಭೆಗೆ ವಿವರಿಸಿದರು.

ಡಾ. ಪದ್ಮಾ ಸಾರಂಗಪಾಣಿಯವರು ಅಜೀಂಪ್ರೇಂಜಿ ಪ್ರತಿಷ್ಠಾನದ ಆಯ್ಕೆ ಕುರಿತು ಸ್ಪಷ್ಟೀಕರಣ ಬಯಸಿದರು. ಇದಕ್ಕೆ ಸಂಬಂಧಿಸಿದಂತೆ ಮಾನ್ಯ ಆಯುಕ್ತರು, ಸಿಮ್ಯಾಟ್ ಸ್ಥಾಪನೆಗೆ ಸರ್ಕಾರದಿಂದ ಒಂದು ಸಲದ ಅನುದಾನ ಮಾತ್ರ ದೊರಕುತ್ತಿದ್ದು, ನಿರಂತರ ಮುಂದುವರಿಕೆ

(sustainability) ಕಷ್ಟಸಾಧ್ಯ. ಈ ನಿಟ್ಟಿನಲ್ಲಿ ಅಜೀಂಪ್ರೇಂಜಿ ಪ್ರತಿಷ್ಠಾನವು ಪ್ರತಿಶತ 50ರಷ್ಟು ಹಣಕಾಸಿನ ನೆರವನ್ನು ನೀಡಲು ಸಿದ್ಧವಿದೆ ಹಾಗೂ ಕಲಿಕಾ ಖಾತರಿ ಕಾರ್ಯಕ್ರಮ (LGP), ಕಂಪ್ಯೂಟರ್ ಶಿಕ್ಷಣ, ಪಾಲಿಸಿ ಪ್ಲಾನಿಂಗ್ ಯೂನಿಟ್ ಇನ್ನಿತರ ಇಲಾಖೆಯ ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು 5-6ವರ್ಷಗಳಿಂದಲೂ ಉತ್ತಮ ಸಹಕಾರವನ್ನು ಇದುವರೆವಿಗೆ ನೀಡಿರುವುದನ್ನು ಸ್ಮರಿಸಿ, ಆದಕಾರಣ ಈ ಪ್ರತಿಷ್ಠಾನವು ಸೂಕ್ತವೆಂದು ತೀರ್ಮಾನಿಸಲಾಯಿತು ಎಂಬ ಅಂಶಗಳನ್ನು ಸಭೆಗೆ ವಿವರಿಸಿದರು. ಆದರೂ ಈ ವಿಷಯವನ್ನು ಇನ್ನೂ ಅಂತಿಮಗೊಳಿಸದಿರುವುದರಿಂದ ಮುಂದಿನ ಇ.ಸಿ. ಸಭೆಯಲ್ಲಿ ಚರ್ಚಿಸಲಾಗುವುದು ಎಂದು ತೀರ್ಮಾನಿಸಲಾಯಿತು.

**ಅಜೆಂಡಾ 2ರ ಉಳಿದ ವಿಷಯಗಳನ್ನು ಚರ್ಚಿಸಿ, ಸಭೆಯು ಅನುಮೋದನೆಯನ್ನು ನೀಡಿತು.**

ಇದೇ ಸಂದರ್ಭದಲ್ಲಿ ಮಾನ್ಯ ಶಿಕ್ಷಣ ಸಚಿವರು 1ನೇ ತರಗತಿಯಿಂದ 2007-08ನೇ ಸಾಲಿನಲ್ಲಿ ಇಂಗ್ಲೀಷ್ ಭಾಷೆಯನ್ನು ಪ್ರಾರಂಭಿಸಲಾಗುತ್ತಿದ್ದು, ಈಗಾಗಲೇ ಪಠ್ಯ ಪುಸ್ತಕಗಳು ಮತ್ತು ಶಿಕ್ಷಕರಿಗೆ ತರಬೇತಿ ಕಾರ್ಯಕ್ರಮಗಳನ್ನು ಕುರಿತು ಅಗತ್ಯ ಕ್ರಮಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಶಿಕ್ಷಕರ ಕಾಯಕ್ಷಮತೆಯ ಪರಿಶೀಲನೆಗಾಗಿ ಅವರಿಗೆ ಜ್ಞಾನವಲಯಕ್ಕೆ ಸಂಬಂಧಿಸಿದಂತೆ ಪರೀಕ್ಷೆ ನಡೆಸಿ, ಕ್ರಮಕೈಗೊಳ್ಳುವುದನ್ನು ಕುರಿತು ಸಭೆಯು ಚರ್ಚಿಸಿತು. ಮಾನ್ಯ ಆಯುಕ್ತರು (ಸಾರ್ವಜನಿಕ ಶಿಕ್ಷಣ ಇಲಾಖೆ) ಶಿಕ್ಷಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಮೂಲಕ ಅಧಿಕಾರಿಗಳು ಪ್ರಾಥಮಿಕ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸಲು ಕ್ರಮಕೈಗೊಳ್ಳುವುದು ಸೂಕ್ತವೆಂದು ಅಭಿಪ್ರಾಯಪಟ್ಟರು.

**ಅಜೆಂಡಾ-3**

**2005-06 ಮತ್ತು 2006-07ನೇ ಸಾಲಿನ ಪ್ರಗತಿ ಪರಿಶೀಲನೆ**

ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು ಪ್ರಾಥಮಿಕ ಶಿಕ್ಷಣದ ಗುಣಮಟ್ಟ ಸುಧಾರಣೆಗಾಗಿ ಇಲಾಖೆ ಮತ್ತು ಸರ್ವ ಶಿಕ್ಷಣ ಅಭಿಯಾನ ಮಿಷನ್ ಮೂಲಕ ಕೈಗೊಳ್ಳಲಾದ ಹಲವಾರು ಕಾರ್ಯಚಟುವಟಿಕೆಗಳ ಅನುಷ್ಠಾನ ಮತ್ತು ಪ್ರಗತಿಯನ್ನು ಕುರಿತು ಸಭೆಗೆ ವಿಷಯ ಮಂಡನೆಯನ್ನು ಮಾಡಿದರು.

- ಪ್ರಮುಖವಾಗಿ, ಶಿಕ್ಷಕರ ನೇಮಕಾತಿ, ವರ್ಗಾವಣೆ, ಸಾಂಸ್ಥಿಕ ಸುಧಾರಣೆ, ಪಠ್ಯಪುಸ್ತಕ, ಸಮವಸ್ತ್ರ, ಮಧ್ಯಾಹ್ನದ ಬಿಸಿಯೂಟ, ಬೈಸಿಕಲ್ ವಿತರಣೆ ಇನ್ನಿತರ ಉತ್ತೇಜನಗಳ ಪ್ರಗತಿಯನ್ನು ಸಭೆಗೆ ವಿವರಿಸಿದರು.

- ಪ್ರಾಥಮಿಕ ಹಂತದಲ್ಲಿ ದಾಖಲಾತಿಯು ಸ್ವಲ್ಪ ಮಟ್ಟಕ್ಕೆ ಇಳಿಮುಖವಾಗುತ್ತಿದ್ದು, ಇದಕ್ಕೆ ಜನಸಂಖ್ಯೆಯು ಇಳಿಮುಖವಾಗುತ್ತಿರುವುದು ಕಾರಣವಾಗಿದೆ. ಅದೇ ರೀತಿ ಮಕ್ಕಳು ಶಾಲೆಯನ್ನು ತೊರೆಯುವ ದರ, ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆಗಳೂ ಗಣನೀಯವಾಗಿ ಇಳಿಮುಖವಾಗಿದ್ದು, ಇವು ಉತ್ತಮ ಸಕಾರಾತ್ಮಕ ಅಂಶಗಳಾಗಿವೆ ಎಂಬುದನ್ನು ವಿವರಿಸಿದರು.

- ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದಡಿ ವಲಸಿತ ಕುಟುಂಬಗಳ ಮಕ್ಕಳು ಮತ್ತು ಕೊಳೆಗೇರಿ ಪ್ರದೇಶಗಳೂ ಸೇರಿದಂತೆ ಎಲ್ಲ ಮಕ್ಕಳಿಗೂ ಶಿಕ್ಷಣವನ್ನು ಒದಗಿಸುವಲ್ಲಿ ಸಂಚಾರಿ ಶಾಲೆ, ಟೆಂಟ್ ಶಾಲೆ, ವಸತಿಯುತ ಮತ್ತು ವಸತಿರಹಿತ ಸೇತುಬಂಧ ಶಿಕ್ಷಣ ಶಿಬಿರಗಳನ್ನು ಆಯೋಜಿಸಿರುವುದನ್ನು ವಿವರಿಸಿದರು. ಅದೇ ರೀತಿ ಸಮನ್ವಯ ಶಿಕ್ಷಣ, ಗೃಹಾಧಾರಿತ ಶಿಕ್ಷಣ, ಪರಿಹಾರ ಬೋಧನೆ, ಶಿಕ್ಷಕರ ತರಬೇತಿ, ಹೆಣ್ಣು ಮಕ್ಕಳ ಮತ್ತು ಪರಿಶಿಷ್ಟ ಜಾತಿ / ವರ್ಗದ ಮಕ್ಕಳ ಶಿಕ್ಷಣಕ್ಕಾಗಿ ವಿಶೇಷ ಗಮನವನ್ನು ನೀಡಿರುವುದನ್ನು ಅಂಕಿ ಅಂಶಗಳೊಂದಿಗೆ ವಿವರಿಸಿದರು. ಈ ಹಂತದಲ್ಲಿ ಕೆ.ಜಿ.ಬಿ.ವಿ. ಶಾಲೆಯ ಮಕ್ಕಳ ಪ್ರಗತಿ ಸಾಧನೆಯನ್ನು ಪ್ರಶಂಸಿಸಲಾಯಿತು.

- ಮಕ್ಕಳ **'ಗುಣಾತ್ಮಕ ಕಲಿಕೆ'**ಗೆ ಪೂರಕವಾಗಿ ಕೆ.ಎಸ್.ಕ್ಯೂ.ಎ.ಓ. ಹಾಗೂ ಕೆ.ಎಸ್.ಕ್ಯೂ.ಇ. ಕಾರ್ಯಕ್ರಮಗಳನ್ನು ಕುರಿತು ವಿವರಿಸಲಾಯಿತು 2005–06 ಮತ್ತು 2006–07ನೇ ಸಾಲಿನಲ್ಲಿ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದಡಿ ಅನುಮೋದಿತ ಮೊತ್ತ ಮತ್ತು ವೆಚ್ಚಗಳ ವಿವರಗಳನ್ನು ಸಭೆಗೆ ನೀಡಲಾಯಿತು.

- ಇದೇ ಸಂದರ್ಭದಲ್ಲಿ ಮಾನ್ಯ ಶಿಕ್ಷಣ ಸಚಿವರು ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಅಗತ್ಯ ಕ್ರಮಕೈಗೊಳ್ಳುವಂತೆ ಸೂಚಿಸಿದರು. ಮಾನ್ಯ ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಇವರು ಎಸ್.ಎಸ್.ಎ. ಅಡಿ 9000 ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದ್ದು, 3300 ಹುದ್ದೆಗಳು ಮಾತ್ರ ಉಳಿದಿರುತ್ತವೆ ಎಂದು ತಿಳಿಸಿದರು. ಈ ಕುರಿತು ಮಾನ್ಯ ಶಿಕ್ಷಣ ಸಚಿವರು ಮೇ ತಿಂಗಳ 30ರೊಳಗೆ ಯಾವ ಹುದ್ದೆಯೂ ಖಾಲಿ ಇರದಂತೆ ಕ್ರಮಕೈಗೊಳ್ಳಲು ಸೂಚಿಸಿದರು. ಈ ಸಂದರ್ಭದಲ್ಲಿ ಅನುದಾನಿತ ಶಾಲೆಗಳಿಗೂ ಸಹ ಉಚಿತ ಪಠ್ಯ ಪುಸ್ತಕಗಳನ್ನು ನೀಡಲು ಸೂಚಿಸಿದರು. ಮಾನ್ಯ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) AWP/B 2007–08ರಲ್ಲಿ 1 ರಿಂದ 8ನೇ ತರಗತಿಯವರೆಗೆ ಅನುದಾನಿತ ಶಾಲೆಗಳಿಗೂ ಸಹ ಪ್ರಸ್ತಾಪಿಸಲಾಗಿದೆ ಎಂಬ ಅಂಶವನ್ನು ತಿಳಿಸಿದರು.

- ಸರ್ಕಾರದ ಮಾನ್ಯ ಮುಖ್ಯ ಕಾರ್ಯದರ್ಶಿಗಳು ನಗರ ಪ್ರದೇಶಗಳಲ್ಲಿ ಹೆಣ್ಣು ಮಕ್ಕಳಿಗೆ ಬೈಸಿಕಲ್ ನೀಡುವ ಅಗತ್ಯದ ಕುರಿತು ಪ್ರಸ್ತಾಪಿಸಿದ್ದನ್ನು ಚರ್ಚಿಸಲಾಯಿತು. ಮಾನ್ಯ ಆಯುಕ್ತರು ಈ ಹಂತದಲ್ಲಿ ನಗರ ಪ್ರದೇಶಗಳಲ್ಲಿ ಟ್ರಾಫಿಕ್ ಅಧಿಕವಾಗಿರುವುದರಿಂದ ಬೈಸಿಕಲ್ ವಿತರಣೆಯು ಅಗತ್ಯವಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಬೈಸಿಕಲ್‌ಗಳ ಸದುಪಯೋಗ ಕುರಿತು ಉಸ್ತುವಾರಿ-ಪರಿಶೀಲನೆಯನ್ನು ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಇವರು ಕೈಗೊಳ್ಳಲು ಸೂಚಿಸಲಾಯಿತು.

- ಶ್ರೀಮತಿ ರೂಮಾ ಬ್ಯಾನರ್ಜಿ, ಸೇವಾ ಇನ್ ಆಕ್ಷನ್ ಸಂಸ್ಥೆ ಇವರು ಸಮನ್ವಯ ಶಿಕ್ಷಣ ಮತ್ತು ಸಮಗ್ರ ಶಿಕ್ಷಣ (Inclusive Education and Integrated Education) ಸಂಬಂಧಿಸಿದಂತೆ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಕುರಿತು ಸರ್ಕಾರದ ನೀತಿಯು ಅಗತ್ಯವಿದೆ ಹಾಗೂ ರಾಜ್ಯ ಸರ್ಕಾರವು ಸಮನ್ವಯ ಶಿಕ್ಷಣಕ್ಕೆ ಸಂಬಂಧಿಸಿದಂತೆ ಯಾವುದೇ ಕಾರ್ಯಕ್ರಮ ಮಾಡಿಲ್ಲವೆಂದು ತಿಳಿಸಿದರು. ಈ ಕುರಿತು ಸರ್ಕಾರದ ಹಂತದಲ್ಲಿ ಪ್ರಸ್ತಾವನೆ ಇರುವುದಾಗಿಯೂ ಸಹ ತಿಳಿಸಲಾಯಿತು.

- ಶೈಕ್ಷಣಿಕ ಮುಖ್ಯವಾಹಿನಿಗೆ ಕರೆತರಲಾದ ಮಕ್ಕಳೂ ಸೇರಿದಂತೆ, ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೂ ರಜೆ ಸಮಯದಲ್ಲಿ ಸಹ ಊಟದ ವ್ಯವಸ್ಥೆಯೊಂದಿಗೆ, ಪರಿಹಾರ ಬೋಧನೆಯ ವಿಶೇಷ ತರಗತಿಗಳನ್ನು ನಡೆಸುವುದು ಉತ್ತಮ ಎಂದು ಮಾನ್ಯ ಶಿಕ್ಷಣ ಸಚಿವರು ಸೂಚಿಸಿದರು.

- ಮಾನ್ಯ ಮುಖ್ಯ ಕಾರ್ಯದರ್ಶಿಗಳು **"ಚಿಣ್ಣರ ಕರ್ನಾಟಕ ದರ್ಶನ"** ಕಾರ್ಯಕ್ರಮವನ್ನು ಪ್ರಾಥಮಿಕ ಹಂತದ ಕೊನೆಯ ತರಗತಿಯ ಎಲ್ಲಾ ಮಕ್ಕಳಿಗೆ ಸಹ ವಿಸ್ತರಿಸುವುದು ಹಾಗೂ ಜಿಲ್ಲೆಯ ಹಂತದಲ್ಲಿಯೂ ಸಹ ಅನುಷ್ಠಾನಗೊಳಿಸುವುದು ಉತ್ತಮ ಎಂದು ಸೂಚಿಸಿದರು.

- ಮಾನ್ಯ ಆಯುಕ್ತರು ಸರ್ವ ಶಿಕ್ಷಣ ಅಭಿಯಾನ ಕಾರ್ಯಕಾರಿ ಸಮಿತಿಯ ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ, ಪ್ರತಿ ಶಾಲೆಯಲ್ಲಿಯೂ **'School Academic Plan'** ಮಾಡಿ ಅದರಂತೆ ಇದಕ್ಕೆ ಅಗತ್ಯವಿರುವ ಸ್ವಲ್ಪ ಶಾಲಾ ಅನುದಾನವನ್ನು ಸಹ ನೀಡುವ ಬಗ್ಗೆ ಸಲಹೆ ನೀಡಿದ್ದು, ಅದನ್ನು ಪರಿಗಣಿಸುವ ಬಗ್ಗೆ ಸಭೆಯು ತೀರ್ಮಾನಿಸಿತು. ಮಾನ್ಯ ಶಿಕ್ಷಣ ಸಚಿವರು ಶಾಲಾ ದತ್ತು ಯೋಜನೆಗೆ ಸಂಬಂಧಿಸಿದಂತೆ ಸಂಪರ್ಕಿಸಬೇಕಾದವರ ವಿಳಾಸ, ದೂರವಾಣಿ ಸಂಖ್ಯೆಯನ್ನು ಪ್ರಕಟಿಸುವಂತೆ ಆಯುಕ್ತರಿಗೆ ಸೂಚಿಸಿದರು. ಸರ್ಕಾರದ ಮಾನ್ಯ ಮುಖ್ಯ

- ಅಜೀಂ ಪ್ರೇಂಜೀ ಪ್ರತಿಷ್ಠಾನದ ಪ್ರತಿನಿಧಿಗಳು ಸರ್ವ ಶಿಕ್ಷಣ ಅಭಿಯಾನದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪಾಲಿನ ಪ್ರಮಾಣವನ್ನು ಶೇ.75 : 25 ರಂತೆ ಮುಂದುವರಿಸಲು ಸರ್ಕಾರವನ್ನು ಕೋರುವ ಕುರಿತು ಪ್ರಸ್ತಾಪಿಸಿದರು. ಈ ಕುರಿತು ಮಾನ್ಯ ಕಾರ್ಯದರ್ಶಿಗಳು (ಪ್ರಾಥಮಿಕ ಶಿಕ್ಷಣ ಮತ್ತು ಪ್ರೌಢ ಶಿಕ್ಷಣ) ಈ ಬಗ್ಗೆ **National Development Council** (NDC) ಯಲ್ಲಿ ಹಲವಾರು ರಾಜ್ಯಗಳ ಮುಖ್ಯ ಮಂತ್ರಿಗಳು ಅಧ್ಯಕ್ಷರಾದ ಮಾನ್ಯ ಪ್ರಧಾನ ಮಂತ್ರಿಗಳನ್ನು ಕೋರಿದ್ದು, ಇನ್ನೂ ಕೇಂದ್ರದಿಂದ ತೀರ್ಮಾನವಾಗಬೇಕಾಗಿದೆ ಎಂದು ತಿಳಿಸಿದರು.

- ಪ್ರೊ. ಸೀತಾರಾಮು, ಹಿರಿಯ ಸಮಾಲೋಚಕರು, ಸರ್ವಶಿಕ್ಷಣ ಅಭಿಯಾನ ಇವರು ಮಾತನಾಡುತ್ತ, ಅಲ್ಪ ಸಂಖ್ಯಾತರ ಶಿಕ್ಷಣವನ್ನು ಬಲಪಡಿಸುವ ನಿಟ್ಟಿನಲ್ಲಿ ಎಸ್.ಎಸ್.ಎ.ಅಡಿ ಉರ್ದು ಸೆಲ್ ಸ್ಥಾಪನೆ, ಉರ್ದು ಶಿಕ್ಷಕರ ತರಬೇತಿ, ಉರ್ದು ತರಗತಿಗಳ ನಿರ್ವಹಣೆ ಹಾಗೂ ಉರ್ದು ಶಿಕ್ಷಣ ಕುರಿತ ಉಸ್ತುವಾರಿಗಾಗಿ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಲು ತಿಳಿಸಿದ್ದನ್ನು ಸಭೆಯು ಪರಿಗಣಿಸಿತು.

- ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಿ.ಇ.ಓ.ರವರು ಸರ್ವ ಶಿಕ್ಷಣ ಅಭಿಯಾನ ಆಡಳಿತ ಮಂಡಳಿಯ ಸಭೆಯನ್ನು ಆಯೋಜಿಸಿ ನಿರ್ವಹಿಸಿದ ರೀತಿಯು ಉತ್ತಮವಾಗಿದ್ದು, ಇತರೆ ಇಲಾಖೆಗಳಿಗೆ ಸಹ ಮಾರ್ಗದರ್ಶಿಯಾಗಿದೆ ಎಂದು ಪ್ರಂಶಸಿಸಿದರು. ಡಾ. ಪದ್ಮಾ ಸಾರಂಗಪಾಣಿಯವರು ಗಣಿತ ವಿಷಯಕ್ಕೆ ಸಹ ಆದ್ಯತೆ ನೀಡುವ ಅಗತ್ಯತೆ ತಿಳಿಸಿದರು ಇದರೊಂದಿಗೆ ಗುಡ್ಡಗಾಡು-ಆದಿವಾಸಿ (Tribal) ಮತ್ತು ಅಲ್ಪಸಂಖ್ಯಾತ ಭಾಷೆಗಳ ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ವಿಶೇಷ ಒತ್ತು ನೀಡುವುದು ಅಗತ್ಯವೆಂದು ತಿಳಿಸಿದರು.

**ಅಜೆಂಡಾ-4**

**2004-05 ಮತ್ತು 2005-06 ನೇ ಸಾಲಿನ ಆಡಿಟ್ ಮತ್ತು ಲೆಕ್ಕ ಪತ್ರಗಳ ಅನುಮೋದನೆ**

2004-05 ಮತ್ತು 2005-06 ನೇ ಸಾಲಿನ ಆಡಿಟ್ ಮತ್ತು ಲೆಕ್ಕ ಪತ್ರಗಳ ಕುರಿತು ಸಭೆಯು ಚರ್ಚಿಸಿ, ಅನುಮೋದನೆಯನ್ನು ನೀಡಿತು.

**ಅಜೆಂಡಾ–5**

**2003–04, 2004–05 ಮತ್ತು 2005–06 ನೇ ಸಾಲಿನ ವಾರ್ಷಿಕ ವರದಿ ಅನುಮೋದನೆ**

ಮಾನ್ಯ ರಾಜ್ಯಯೋಜನಾ ನಿರ್ದೇಶಕರು 2003–04, 2004–05 ಮತ್ತು 2005–06 ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸಿದರು. ಈ ಕುರಿತು ಸಭೆಯು ಅನುಮೋದನೆಯನ್ನು ನೀಡಿತು.

**ಅಜೆಂಡಾ–6**

**2007–08 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆ ಮಂಡನೆ**

ಮಾನ್ಯ ರಾಜ್ಯಯೋಜನಾ ನಿರ್ದೇಶಕರು 2007–08 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯ ಮುಖ್ಯಾಂಶಗಳನ್ನು ಸಭೆಯಲ್ಲಿ ಮಂಡಿಸಿದರು. ಈ ಕುರಿತು ಸಭೆಯು ಚರ್ಚಿಸಿ ಅನುಮೋದನೆಯನ್ನು ನೀಡಿತು.

ಮಾನ್ಯ ನಿರ್ದೇಶಕರು (ಕಾರ್ಯಕ್ರಮಗಳು), ಸರ್ವ ಶಿಕ್ಷಣ ಅಭಿಯಾನ ಇವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಸಹಿ/-

ಅಧ್ಯಕ್ಷರು

ಆಡಳಿತ ಮಂಡಳಿ ಸಭೆ

D:\3rd GC Proceeding\3rd GC meeting.doc